**2 ನೇ ಹೆಚ್ಚುವರಿ ದಿವಾಣಿ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ ಗೋಕಾಕ.**

ಸಿ.ಸಿ. ನಂ.468/2013

ಸಿಡಬ್ಲ್ಯೂ.5 ಪಿಡಬ್ಲ್ಯೂ.1

ಸಾಕ್ಷಿಯ ಹೆಸರು - ನಾರಾಯಣ ಶಂಕರರಾವ ದೇಶಪಾಂಡೆ

ವಯಸ್ಸು - 63 ವರ್ಷ

ಉದ್ಯೋಗ - ನಿವೃತ್ತ ಎ.ಎಸ್.ಆಯ.

ವಾಸ - ಬೆಂಗಳೂರು

ದಿನಾಂಕಃ 11-02-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ಮಾನ್ಯ ಸ.ಸ.ಅ.ರವರಿಂದಃ**

ನಾನು 2000 ರಿಂದ 2012 ರವರೆಗೆ ಗೋಕಾಕ ಅಬಕಾರಿ ವಲಯದಲ್ಲಿ ಅಬಕಾರಿ ಪೇದೆ ಅಂತಾ ಕೆಲಸ ಮಾಡಿರುತ್ತೇನೆ.

ದಿಃ 20-07-2012 ರಂದು ಚಾಸಾ-1 ರವರು ಚಾಸಾ-4 ರವರನ್ನು ಕರೆದು ಪಂಚರನ್ನು ಕರೆಸಲು ಹೇಳಿದಂತೆ ಚಾಸಾ-4 ರವರು ಚಾಸಾ-2 ಮತ್ತು 3 ಪಂಚರನ್ನು ಕರೆದುಕೊಂಡು ಬಂದಿರುತ್ತಾರೆ. ಚಾಸಾ-1 ರವರು ಬಾತ್ಮಿ ವಿಷಯವನ್ನು ನಮಗೆ ತಿಳಿಸಿದರು. ನಂತರ ನಮ್ಮ ಸರಕಾರಿ ಜೀಪ ನಂ. ಕೆಎ-22 ಜಿ 454 ನೇದ್ದರಲ್ಲಿ ನಾವೆಲ್ಲರೂ ಕೂಡಿ ಸುಲಧಾಳ ಮತ್ತು ಹುದಲಿ ನಡುವೆ ಬ್ರಿಜ್ ಹತ್ತಿರ ಹೋಗಿ ಮರೆಯಲ್ಲಿ ನಮ್ಮ ವಾಹನವನ್ನು ನಿಲ್ಲಿಸಿ ಅಲ್ಲಿರುವ ಕಬ್ಬಿನ ಹೊಲದಲ್ಲಿ ನಿಂತು ನಾವು ವಾಚ್ ಮಾಡಿದೆವು. ಆಗ ಸಮಯ ಮುಂಜಾನೆ 11-00 ಗಂಟೆಯಾಗಿತ್ತು. ಸದರಿ ಬ್ರಿಜ್ ಮೇಲೆ ಹುದಲಿ ಕಡೆಯಿಂದ ಒಂದು ದ್ವಿಚಕ್ರ ವಾಹನ ಬಂತು. ದೂರದಿಂದ ನಮಗೆ ಸದರಿ ದ್ವಿಚಕ್ರ ವಾಹನದ ಪೆಟ್ರೋಲ್ ಟ್ಯಾಂಕ ಮೇಲೆ ಕರಿ ಬಣ್ಣದ ವಸ್ತು ಇಟ್ಟುಕೊಂಡು ಬರುವದು ಕಂಡು ಬಂದಿತು. ನಾವು ಕೈಮಾಡಿ ನಿಲ್ಲಿಸಲು ದ್ವಿಚಕ್ರ ವಾಹನದ ಚಾಲಕ ಸಮವಸ್ತ್ರದಲ್ಲಿ ಇದ್ದ ನಮ್ಮನ್ನು ನೋಡಿ ವಾಹನವನ್ನು ಬಿಟ್ಟು ಕಬ್ಬಿನ ಹೊಲದಲ್ಲಿ ಓಡಿ ಹೋದನು. ನಾವು ಬೆನ್ನಟ್ಟಿದರೂ ಅವನು ಸಿಗಲಿಲ್ಲ. ಚಾಸಾ-1, ನಾನು ಮತ್ತು ಚಾಸಾ-4 ಕೂಡಿ ವಾಹನ ಹತ್ತಿರ ಬಂದು ಪಂಚರ ಸಮಕ್ಷಮ ತಪಾಸಣೆ ಮಾಡಲಾಗಿ ಸದರಿ ವಾಹನ ಸುಜುಕಿ ಮಾಕ್ಸ 100 ಕೆಎ-23 ಎಫ್ 6299 ಅಂತಾ ಇದ್ದು ಒಂದು ಕರಿ ಬಣ್ಣದ ರಬ್ಬರ ಟ್ಯೂಬನಲ್ಲಿ 25 ಲೀಟರ ಕಳ್ಳಭಟ್ಟಿ ಸರಾಯಿ ಇರುವದು ಕಂಡು ಬಂದಿತು. ಚಾಸಾ-1 ರವರು ಪಂಚರಿಗೆ ತಿಳಿಸಿ ಅದರಲ್ಲಿಂದ 180 ಎಂ.ಎಲ. ಕಳ್ಳಭಟ್ಟಿ ಸರಾಯಿಯನ್ನು ರಸಾಯನಿಕ ಪರೀಕ್ಷೆಗೆ ತೆಗೆದು ಬಿಳಿ ಬಟ್ಟೆಯಿಂದ ಸುತ್ತಿ ಶೀಲ್ ಮಾಡಿ ಅಬಕಾರಿ ಕಚೇರಿಯ ಅರಗಿನ ಶೀಲ್ ಹಾಕಿ ಚಾಸಾ-1 ಮತ್ತು ಪಂಚರ ಸಹಿವುಳ್ಳ ಚೀಟಿಯನ್ನು ಅಂಟಿಸಿದರು. ಸ್ಥಳದಲ್ಲಿ ಪಂಚನಾಮೆಯನ್ನು 11-30 ಗಂಟೆಯಿಂದ 12-30 ಗಂಟೆಯವರೆಗೆ ಮಾಡಿದ್ದು ಇರುತ್ತದೆ. ವಾಹನ ಮತ್ತು ಮುದ್ದೆ ಮಾಲಿನೊಂದಿಗೆ ಕಚೇರಿಗೆ ಬಂದು ಚಾಸಾ-1 ರವರು ಸ.ತ ಪಿರ್ಯಾದಿ ನೀಡಿರುತ್ತಾರೆ. ಈ ಕುರಿತು ನಾನು ಹೇಳಿಕೆ ನೀಡಿರುತ್ತೇನೆ.

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>**

ಗೋಕಾಕದಿಂದ ಘಟನಾ ಸ್ಥಳ ಸುಮಾರು 35-36 ಕಿ.ಮೀ ಇದೆ. ನಾವು ದಾಳಿಗೆ ಹೋಗುವಾಗ ಮೊಮೆಂಟ್ ರಜಿಸ್ಟರದಲ್ಲಿ ನಮೂದು ಮಾಡಿ ಸಹಿ ಮಾಡಿ ಹೋಗುತ್ತೇವೆ ಎಂದರೆ ಸರಿ. ಆಗ ರಸ್ತೆ ಸರಿ ಇಲ್ಲದೇ ಇರುವುದರಿಂದ ಘಟನಾ ಸ್ಥಳಕ್ಕೆ ಹೋಗಲು ಒಂದು ಗಂಟೆ ಬೇಕಾಯಿತು. ಚಾಸಾ-1 ರವರು ಬಾತ್ಮಿ ಬಂದ ನಂತರ 6-45 ಗಂಟೆಗೆ ನನಗೆ ಪೋನ ಮುಖಾಂತರ ಹೇಳಿದ್ದು ನಾನು 7-00 ಗಂಟೆಗೆ ನಮ್ಮ ಕಚೇರಿಗೆ ಬಂದೆನು. ಗೋಕಾಕ ಹುದಲಿ ರಸ್ತೆ ಬೆಳಗಾವಿಗೆ ಹೋಗವ ರಸ್ತೆ ಇರುವುದರಿಂದ ಅಲ್ಲಿ ಸಾಕಷ್ಟು ವಾಹನಗಳು ಓಡಾಡುತ್ತವೆ ಎಂದರೆ ಸರಿ. ನಾವು 8-30 ಗಂಟೆಗೆ ಹೋಗಿದ್ದು ಎರಡರಿಂದ ಎರಡುವರೆ ಗಂಟೆ ವಾಚ್ ಮಾಡಿರುತ್ತೇವೆ. ನಾವು ವಾಚ್ ಮಾಡಲು ನಿಂತಿದ್ದ ಸ್ಥಳದಲ್ಲಿ ರಸ್ತೆಗಿಂತ ಹೊಲಗಳು ತೆಗ್ಗಿನಲ್ಲಿವೆ ಎಂದರೆ ಸರಿಯಲ್ಲ.

ಆರೋಪಿಯು ಪ್ರತಿಷ್ಠಿತ ರೈತ ಇದ್ದಾನೆ ಎಂದರೆ ಗೊತ್ತಿಲ್ಲ. ಆರೋಪಿಯ ಯಾವದೇ ತಪ್ಪು ಇರದಿದ್ದರೂ ಅವನ ವಾಹನವನ್ನು ಈ ಪ್ರಕರಣದಲ್ಲಿ ಅಳವಡಿಸಿ ಅವನಿಗೆ ತೊಂದರೆ ಕೊಡುವ ಉದ್ದೇಶದಿಂದ ಆರೋಪಿಯ ವಿರುದ್ಧ ಸುಳ್ಳು ಪಿರ್ಯಾದಿ ನೀಡಲಾಗಿದೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಸಂಗತಿಗಳು ಸುಳ್ಳು ಇವೆ ಎಂದರೆ ಸರಿಯಲ್ಲ. ನಮ್ಮ ಠಾಣೆಯಲ್ಲಿ ಉಳಿದ ವೀಲೆವಾರಿ ಆಗದ ಸರಾಯಿ ಮಾಲುಗಳನ್ನು ವಿಲೇವಾರಿ ಈ ಪ್ರಕರಣದಲ್ಲಿ ಅಳವಡಿಸಿದ್ದೇವೆ ಎಂದರೆ ಸರಿಯಲ್ಲ. ಘಟನಾ ಸ್ಥಳಕ್ಕೆ ಹೋಗದೇ ಪಂಚನಾಮೆಯನ್ನು ಠಾಣೆಯಲ್ಲಿ ತಯಾರಿಸಿದ್ದೇವೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಅ.

Sd/-

2ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ
ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ.